ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 288/2023**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಜೀವಾ ರಾಮ್ | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಕೆವಾರಾಮ್ | 12 | 12 |
| ವಯಸ್ಸು | 27 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **29.01.2026.** | |
| ಉದ್ಯೋಗ | ಬಟ್ಟೆ ವ್ಯಾಪಾರ | | |
| ವಾಸ ಸ್ಥಳ | ರಾಜಸ್ಥಾನ್ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನಾನು ರಾಜಸ್ಥಾನದಲ್ಲಿ ವಾಸ ಇದ್ದೇನೆ. ನನಗೆ ಬೀಜಲ ರಾಮ್ / ಚಾಸಾ. 1 ಗೊತ್ತು. ಸುಮಾರು 3 – 4 ವರ್ಷಗಳ ಹಿಂದೆ ನಾವು ದೇವಲಾಪುರ, ದೇನಗೊಂದಿ ಬಳಿ ಕಾಸ್‌ಮೆಟಿಕ್ ಐಟಂ ಗಳನ್ನು ಸಪ್‌ಲೈ ಮಾಡುತ್ತಿದ್ದೇವೆ. ಸುಮಾರು 3 – 4 ವರ್ಷಗಳ ಹಿಂದೆ ನಾವು ಠಾಣೆಗೆ ಹೋಗಿ ಸಹಿ ಮಾಡಿದ್ದೇವೆ. ಚಾಸಾ. 1 ರವರ ಮೇಲೆ ಯಾರೋ ಜಗಳ ಮಾಡಿದ ವಿಚಾರದಲ್ಲಿ ಸಹಿ ಮಾಡಿರುತ್ತೇವೆ. ಆರೋಪಿತರು ಪರಿಚಯ ಇಲ್ಲ. ಆರೋಪಿತರು ಹಾಗೂ ಚಾಸಾ. 1 ರವರ ನಡುವೆ ಗಲಾಟೆಯಾದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳಿಕೆ ನೀಡಿಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 25.03.2023 ರಂದು ರಾತ್ರಿ 11.40 ರಿಂದ ಪಾನ್ ಪರಕ್ ಗೋಡಾನ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಮಧ್ಯಾರಾತ್ರಿ 1.10 ನಿಮಿಷಕ್ಕೆ ಇನೋವಾ ಕಾರ್ ನಲ್ಲಿ 5 ಜನ ಬಂದಿದ್ದು ಆಗ ಚಾಸಾ. 1 ರವರು ಪರಿಚಯ ಇದ್ದು ಒಬ್ಬರು ಬಾಲಸುಬ್ರಮಣ್ಯಂ ಎಂದು ಹೇಳಿ ಉಳಿದ 4 ಜನರ ಪರಿಚಯ ಇಲ್ಲ ಎಂದು ಹೇಳಿದ್ದು, ಎಲ್ಲರೂ ಚಾಕು, ದೊಣ್ಣೆ ಮಾರಕಾಸ್ತ್ರಗಳನ್ನು ಹಿಡಿಕೊಂಡು ಇಲ್ಲಿ ಏನು ಮಾಡುತ್ತಿದ್ದೀರ ಎಂದು ಬೈದು ನಮಗೆ ಮಾಮುಲಿ ಕೊಡಬೇಕು ಎಂದು 10 ಲಕ್ಷ ಹಣ ಕೊಡು ಇಲ್ಲವಾದರೆ

ಹೊಡೆಯುತ್ತೇವೆ ಎಂದು ಹೆದರಿಸಿ ನನ್ನನ್ನು, ಚಾಸಾ. 1, ಚಾಸಾ. 9, ಅಶೋಕ್, ಅರ್ಜುನ್, ಬೊಮರ್ ಲಾಲ್, ಸುರೇಶ್ ಗೆ ದೊಣ್ಣೆಯಿಂದು ಹೊಡೆದು ಹಣ ಕೊಡದೇ ಇದ್ದರೇ ಸಾಯಿಸುತ್ತೇವೆ ಎಂದು ಚುಚ್ಚಲು ಬಂದಿದ್ದು ಹಾಗೂ ನಾವು ಹೆದರಿ ಹಣ ಕೊಟ್ಟಿದ್ದು, ಅವರು 3 ಲಕ್ಷ ಮಾತ್ರ ಇದೆ ಉಳಿದ 7 ಲಕ್ಷ ಕೊಡಬೇಕೆಂದು ನಮ್ಮನ್ನು ಕೂಡಿ ಹಾಕಿ ಮತ್ತೆ ಹೊಡೆಯಲು ಬಂದಿದ್ದರು ಎಂದರೆ ಸರಿ ಅಲ್ಲ. ನಂತರ ಬೊಮರ್ ಲಾಲ್ ಬಳಿ ಇದ್ದ ಫೋನ್ ಅನ್ನು ಕಿತ್ತುಕೊಂಡು ಹೊದರು ಎಂದರೆ ಸರಿ ಅಲ್ಲ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಹೇಳಿಕೆಯನ್ನು ನಿಶಾನೆ.ಪಿ. 14 ಎಂದು ಗುರುತಿಸಲಾಯಿತು. ಆರೋಪಿತರಿಗೆ ಹೆದರಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.
ಪಾಟೀ ಸವಾಲುಃ ಆರೋಪಿತರ ಪರ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.